# <u>ಕರ್ನಾಟಕ ವಿಧಾನ ಪರಿಷತ್ತು</u>

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1044 (962)

2) ಸದಸ್ಯರ ಹೆಸರು : ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 15.03.2021

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಎಷ್ಟು ಆನೆ ಶಿಬಿರಗಳಿವೆ; ಜಿಲ್ಲಾವಾರು ಶಿಬಿರಗಳ ಹೆಸರಿನೊಂದಿಗೆ ಅಲ್ಲಿರುವ ಆನೆಗಳ ಸಂಖ್ಯೆ ಮತ್ತು ಮಾವುತರ ಸಂಖ್ಯೆಗಳ ವಿವರ ನೀಡುವುದು; | ರಾಜ್ಯದಲ್ಲಿರುವ ಆನೆ ಶಿಬಿರ, ಆನೆಗಳ ಸಂಖ್ಯೆ ಮತ್ತು ಮಾವುತರ ಸಂಖ್ಯೆ ಈ ಕೆಳಕಂಡಂತಿದೆ: |

| ಕ್ರ ಸಂ | ಜಿಲ್ಲೆ | ಆನೆ ಶಿಬಿರದ ಹೆಸರು / ವಿಭಾಗ | | ಆನೆಗಳ ಸಂಖ್ಯೆ | ಮಾವುತರ ಸಂಖ್ಯೆ |
|---|---|---|---|---|---|
| 1 | ಶಿವಮೊಗ್ಗ | ಸಕ್ರೈಬೈಲು, ವನ್ಯಜೀವಿ ವಿಭಾಗ ಶಿವಮೊಗ್ಗ | | 22 | 14 ಖಾಯಂ ಸಿಬ್ಬಂದಿ |
| 2 | ಚಾಮರಾಜನಗರ | ರಾಮಾಪುರ, ಬಂಡೀಪುರ ಹುಲಿ ಯೋಜನೆ | | 13 | 11 ಖಾಯಂ ಸಿಬ್ಬಂದಿ |
| 3 | ಕೊಡಗು | ಕಂತಾಪುರ / ಮತ್ತಿಗೋಡು | ನಾಗರಹೊಳೆ ಹುಲಿ ಯೋಜನೆ | 23 | 21 ಖಾಯಂ ಸಿಬ್ಬಂದಿ |
| | | ಬಳ್ಳೆ | | 03 | 02 ಖಾಯಂ ಸಿಬ್ಬಂದಿ |
| | | ದೊಡ್ಡಹರವೆ | | 05 | 05 ಹೊರಗುತ್ತಿಗೆ |
| 4 | ಚಾಮರಾಜನಗರ | ಕೆ.ಗುಡಿ, ಬಿ.ಆರ್.ಟಿ ಹುಲಿ ಯೋಜನೆ | | 01 | 01 ಖಾಯಂ ಸಿಬ್ಬಂದಿ |
| 5 | ಉತ್ತರಕನ್ನಡ | ಪಣಸೋಲಿ, ದಾಂಡೇಲಿ ಹುಲಿ ಯೋಜನೆ | | 03 | 04 ಹೊರಗುತ್ತಿಗೆ |
| 6 | ಕೊಡಗು | ದುಬಾರೆ, ಮಡಿಕೇರಿ ಪ್ರಾದೇಶಿಕ ವಿಭಾಗ | | 31 | 16 ಖಾಯಂ ಸಿಬ್ಬಂದಿ<br>10 ಹೊರಗುತ್ತಿಗೆ |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕೊಡಗು ಜಿಲ್ಲೆ, ಸೋಮವಾರ ಪೇಟೆ ತಾಲ್ಲೂಕಿನ ಚಿಕ್ಲಿ ಹೊಳೆ ಜಲಾಶಯದ ಬಳಿ ಆನೆ ಪಾರ್ಕ್ ಅಥವಾ ಸಾಕಾನೆ ಶಿಬಿರವನ್ನು ಸ್ಥಾಪನೆ ಮಾಡಿದ್ದಲ್ಲಿ ಅರಣ್ಯ ಇಲಾಖೆಗೆ ಉಪಯೋಗವಾಗುವುದಿಲ್ಲವೇ; ಇದಕ್ಕೆ ಸರ್ಕಾರದ ಚಿಂತನೆಗಳೇನು? (ವಿವರ ನೀಡುವುದು) | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ಸಂಖ್ಯೆ: 21570/2019ರಲ್ಲಿ ನೀಡಿರುವ ಆದೇಶದಂತೆ, ಆನೆ ಶಿಬಿರಗಳಲ್ಲಿ ಹೆಚ್ಚಿನ ಸಂಖ್ಯೆಯ ಆನೆಗಳಿಗಾಗಿ ಹೊಸ ಸಾಕಾನೆ ಶಿಬಿರವನ್ನು ಸ್ಥಾಪಿಸಿ, ಸ್ಥಳಾಂತರಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಕುಶಾಲನಗರ ವಲಯ ವ್ಯಾಪ್ತಿಯ ಅತ್ತೂರು ಶಾಖೆಯ ಹಾರಂಗಿ ಜಲಾಶಯದ ಟ್ರೀ ಪಾರ್ಕ್ ಬಳಿ ಹೊಸ ಸಾಕಾನೆ ಶಿಬಿರವನ್ನು ಸ್ಥಾಪಿಸಲು ದಿನಾಂಕ:12.02.2021 ರಂದು ಅನುಮತಿ ನೀಡಲಾಗಿದ್ದು,ಇದಕ್ಕೆ ಬೇಕಿರುವ ಮೂಲಭೂತ ಸೌಕರ್ಯ ಅಭಿವೃದ್ಧಿಯ ಕಾಮಗಾರಿಗಳನ್ನು ಕೊಡಗು ಮಾನವ ವನ್ಯಪ್ರಾಣಿ ಸಂಘರ್ಷ ಉಪಶಮನ ಪ್ರತಿಷ್ಠಾನ ನಿಧಿಯಡಿ ಭರಿಸಲು ಸೂಚಿಸಲಾಗಿರುತ್ತದೆ. |

ಸಂಖ್ಯೆ: ಅಪಜೀ 42 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು